ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕುಮಾರಿ ಪದ್ಮಾಕ್ಷಿ | ಪ್ರಾಸಾಃ 8 |
| ತಂದೆಯ ಹೆಸರು | : | ರಾಘು ಮೇಸ್ತ್ರಿ | ಚಾಸಾಃ 14 |
| ಪ್ರಾಯ | : | 37 ವರ್ಷ | **ದಿನಾಂಕಃ 17.07.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಅಂಗಡಿ ವ್ಯಾಪಾರ | |
| ವಾಸಸ್ಥಳ | : | ಕೆಂಚಗುಡ್ಡೆ ಮನೆ, ಬಡಗಎಕ್ಕಾರು ಗ್ರಾಮ ಮಂಗಳೂರು | |

**ಮುಖ್ಯ ವಿಚಾರಣೆಃ  ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನನಗೆ ಈ ಪ್ರಕರಣದ ಆರೋಪಿ ಮತ್ತು ಮೃತ ಸರೀತಾ ರವರ ಪರಿಚಯ ಇರುತ್ತದೆ.  ಅವರು ತೆಂಕ ಎಕ್ಕಾರು ಎಂಬಲ್ಲಿನ ದುರ್ಗಾ ನಗರ ಎಂಬಲ್ಲಿ ವಾಸವಿದ್ದರು. ಅವರಿಗೆ  ಒಬ್ಬನೇ ಮಗ, ಆತನ ಹೆಸರು ರಾಹುಲ್ .

2. ದಿನಾಂಕ 28.11.2022 ರಂದು ನನಗೆ ಈ ಪ್ರಕರಣದ ಆರೋಪಿ  ಆತನ ಹೆಂಡತಿಯನ್ನು ರೀಪಿನಿಂದ ಕೊಲೆ ಮಾಡಿರುವ ವಿಚಾರ ತಿಳಿದು, ಆರೋಪಿ ಮತ್ತು ಸರಿತಾ ವಾಸವಿದ್ದ ಮನೆಗೆ ಹೋಗಿ ನೋಡಿರುತ್ತೇನೆ.  ಸರಿತಾ ಮಲಗಿದ್ದ ಸ್ಥಿತಿಯಲ್ಲೇ ಮೃತಪಟ್ಟಿದ್ದರು.   ಈ ಬಗ್ಗೆ ಚಾಸಾ-1 ರವರು ಪೋಲಿಸರಿಗೆ ದೂರು ನೀಡಿದ್ದು, ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ನಾನು ಪಂಚಾಯಿತಿಯಸದಸ್ಯೆಯಾಗಿರುವುದರಿಂದ ನನ್ನನ್ನು ಮತ್ತು ಚಾಸಾ-13 ಮತ್ತು 15 ರವರನ್ನು ಮೃತ ಸರಿತಾಳ ಶವ ಮಹಜರಿಗೆ ಸಾಕ್ಷ್ಯದಾರರಾಗಿ ಹಾಜರಿರಲು

ಕೇಳಿಕೊಂಡಿದ್ದು ನಾವು ಒಪ್ಪಿರುತ್ತೇವೆ. ಅದರಂತೆ ಬೆಳಗ್ಗೆ 10.30 ರಿಂದ ಮದ್ಯಾಹ್ನ 1 ಗಂಟೆಯವರಿಗೆ ಸರೀತಾಳ ಮೃತದೇಹದ ಶವ ಮಹಜರನ್ನು ಆಕೆಯ ಮನೆಯಲ್ಲಿ ತಯಾರಿಸಿರುತ್ತಾರೆ. ಮೃತಳ ಮೈಮೇಲೆ ಒಂದು ಲೆಗಿನ್ಸ್ ಪ್ಯಾಂಟ್ ಮಾತ್ರ ಇದ್ದು , ಟಾಪ್ ಇರಲಿಲ್ಲ, ಒಂದು ಬೆಡ್ ಶೀಟ್ ಹಾಕಲಾಗಿತ್ತು. ಸರಿತಾಳ ಬಲಕೈಯ ತೋಳಿನ ಮೂಳೆ ಮುರಿತ ಮತ್ತು ಎಡಕ್ಕೆ ಮಣಿಗಂಟಿನ ಮೂಳೆ ಮುರಿತವಾಗಿದ್ದು ಮತ್ತು ಬಲಕಾಲಿನ ತೊಡಯಲ್ಲಿ ಮೂಳೆಮುರಿತವಾಗಿತ್ತು, ಒಟ್ಟು 12 ಕಣ್ಣಿಗೆ ಕಾಣುವಂತಹ ಗಾಯಗಳು ಮೃತದೇಹದ ಮೇಲೆ ಕಂಡು ಬಂದಿತ್ತು. ಪಂಚರಾದ ನಾವು ಸರಿತಾಳಿಗೆ ಅವಳ ಗಂಡನಾದ ದುರ್ಗೇಶನು ಮರದ ರೀಪಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿರುತ್ತಾನೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ತಯಾರಿಸಿದ ಶವಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಶವಮಹಜರನ್ನು **ನಿಪಿ-9** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-9 (ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ-**

3. ಆರೋಪಿ ನನ್ನ ಸಂಬಂಧಿ . ಅವರ ಮನೆಯನ್ನು ನಾನು ನೋಡಿರುತ್ತೇನೆ. ಅವರ ಮನೆಯ ಬದಿಯಲ್ಲಿ ತುಂಬಾ ಆಳ ಇರುತ್ತದೆ. ರಾತ್ರಿ ಸಮಯ ದುರ್ಗೇಶಳ ಹೆಂಡತಿ ಸರಿತಾ ಸದರಿ ಆಳದಲ್ಲಿ ಆಯತಪ್ಪಿ ಬಿದ್ದಿರುತ್ತಾರೆ ಮತ್ತು ಆಗ ಪೆಟ್ಟಾಗಿರುತ್ತದೆ ಎಂದರೆ ನನಗೆ ತಿಳಿದಿಲ್ಲ. ಸದರಿ ಹಳ್ಳದಲ್ಲಿ ಬಿದ್ದರೆ ಮೃತಳ ಮೇಲೆ ಆಗಿರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ.

4. ನಾನು ಪಂಚಾಯಿತಿ ಸದಸ್ಯೆಯಾದ ಸಮಯದಲ್ಲಿ, ಆರೋಪಿ ನಮ್ಮ ವಿರುದ್ಧ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಹೌದು. ಹಾಗಾಗಿ ಪರ ವಿರೋದ ಎಂಬ ವೈಮನಸ್ಸು ಆರೋಪಿಯ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದಸ್ಯೆಯಾದ ಸಮಯದಲ್ಲಿ ಆರೋಪಿ ಸ್ವಂತ ಮನೆಗಾಗಿ ಪ್ರತಿಭಟನೆ ಮಾಡಿರುತ್ತಾನೆ ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿ ನಂತರದಲ್ಲಿ ಪ್ರತಿಭಟನೆ ಮಾಡಿರುವುದಾಗಿ ನುಡಿಯುತ್ತಾರೆ. ಆ ಸಮಯದಲ್ಲಿ ಆರೋಪಿಗೆ ಹಲವು ವಿರೋಧಿಗಳು ಇದ್ದರು ಎಂದರೆ ನನಗೆ ತಿಳಿದಿಲ್ಲ, ನಂತರದಲ್ಲಿ ಹೌದು ಎಂದು ನುಡಿಯುತ್ತಾರೆ. ಆರೋಪಿ ಸಾರ್ವಜನಿಕ ಸೇವೆಯನ್ನು ಮಾಡುವವರು, ಹಾಗಾಗಿ ಆತನ ವಿರುದ್ಧ ಸುಳ್ಳು ಪ್ರಕರಣ ಹಾಕಲಾಗಿದೆಂದರೆ ಸರಿಯಲ್ಲ.

5. ನಾನು ನಿಪಿ-9 ರ ಮಹಜರಿಗೆ ಸಹಿಯನ್ನು ಆರೋಪಿಯ ಮನೆಯಲ್ಲಿ ಹಾಕಿರುತ್ತೇನೆ. ನಾನು ಠಾಣೆಗೆ ಹೋಗಿರುವುದಿಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.